# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**: 08/2025

ಡಬ್ಲ್ಯೂ.ಡಬ್ಲ್ಯೂ-1

**<u>ದಿನಾಂಕ 21.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಮುಂದುವರೆದ ಪಾಟೀ ಸವಾಲುಃ 2 ನೇ ಪಕ್ಷಗಾರ ಸಂಖ್ಯೆ-2 ಪರ ಶ್ರೀಮತಿ.ಎಲ್.ಎನ್.ಆರ್. ವಕೀಲರಿಂದಃ</u>**

ನಾನು ಮೊದಲು 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯಲ್ಲಿ ನೇಮಕಾತಿಗೊಂಡಿದೆ, ಸಾಕ್ಷಿ ಮುಂದುವರೆದು ಮ್ಯಾಕ್ ಸಂಸ್ಥೆಯಿಂದ 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಗೆ ನೇಮಕಾತಿಗೊಂಡಿದೆ. ಎಸ್.ಮ್ಯಾಕ್ ಸಂಸ್ಥೆಯು ಮುಕ್ತಯಗೊಂಡಿದ್ದು ನಂತರ ಅಲ್ಲಿಂದ 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಗೆ ಕಳುಹಿಸಿಕೊಟ್ಟಿದ್ದರು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಏಜೆನ್ಸಿ ಬದಲಾವಣೆ ಮಾಡಿ 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಗೆ ಕಳುಹಿಸಿಕೊಟ್ಟಿದ್ದರು ಎಂದು ನಾನು ದಾಖಲೆ ಕೊಟ್ಟಿರುತ್ತಾರೆ ಎನ್ನುತ್ತಾರೆ. ಎಸ್.ಮ್ಯಾಕ್ ಸಂಸ್ಥೆಗೂ ನನಗೂ ಈಗ ಯಾವುದೇ ಸಂಬಂಧ ಇರುವುದಿಲ್ಲ.

2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯಲ್ಲಿ ನನ್ನನ್ನು ಹೊಸದಾಗಿ ನೇಮಕಾ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎಸ್.ಮ್ಯಾಕ್ ಸಂಸ್ಥೆಯವರು ನನ್ನ ಪಿ.ಎಫ್. ಮತ್ತು ಇ.ಎಸ್.ಐ. ನೀಡಿದ ನಂತರ 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಗೆ ನನ್ನನ್ನು ಕಳುಹಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ನಾನು ಕರ್ತವ್ಯ ಲೋಪವನ್ನು ಯಾತಕ್ಕಾಗಿ ಮಾಡಿರುತ್ತೇನೆ ಎಂಬುದನ್ನು ನನ್ನ ಹಿರಿಯ ಅಧಿಕಾರಿಗೆ ತಿಳಿಸದೆ ನೇರವಾಗಿ Labour Commissioner ಮುಂದು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಇಲ್ಲದ ಸಲ್ಲದ ಆರೋಪ ಮಾಡಿ ನಾನು Labour Commission ಮುಂದೆ ಫಿರ್ಯಾದು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಕೆಲಸಕ್ಕೆ ಯಾಕೆ ಬರುತ್ತಿಲ್ಲ ಎಂದು ನನಗೆ 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯವರು registered post ಮೂಲಕ ಪತ್ರ ಕಳುಹಿಸಿದ್ದರು ಅದಕ್ಕೆ ನಾನು ಯಾವುದೇ ಉತ್ತರ ಕೊಟ್ಟಿಲ್ಲ ಎಂದರೆ ಸರಿಯಲ್ಲ. 2 ನೇ ಪಕ್ಷಗಾರರ ಸಂಖ್ಯೆ-2 ರವರ ಸಂಸ್ಥೆಯವರನ್ನು ತಪ್ಪಿತಸ್ಥರನ್ನಾಗಿ ಮಾಡಲು ನಾನು ಸುಳ್ಳು ಅರ್ಜಿಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**